"ಮಧುರ ಮಕ್ಕಳೇ - ನೀವು ಕರ್ಮಯೋಗಿ ಆಗಿದ್ದೀರಿ, ಕರ್ಮ ಮಾಡುತ್ತಿದ್ದರೂ ತಂದೆಯ ನೆನಪಿನಲ್ಲಿರಿ, ನೆನಪಿನಲ್ಲಿ ಇರುವುದರಿಂದ ಯಾವುದೇ ವಿಕರ್ಮ ಆಗುವುದಿಲ್ಲ"

ಪ್ರಶ್ನೆ: ತಂದೆಯೊಂದಿಗೆ ಬುದ್ಧಿಯೋಗ ಇಲ್ಲದೆ ಇರಲು ಒಂದು ಮುಖ್ಯ ಕಾರಣವಿದೆ- ಅದು ಯಾವುದು?

ಉತ್ತರ: ಲೋಭ. ಯಾವುದಾದರೂ ವಿನಾಶಿ ವಸ್ತುವಿನ ಮೇಲೆ ಲೋಭ ಇದ್ದರೆ, ತಿನ್ನುವ ಅಥವಾ ತೊಡುವ ಆಸಕ್ತಿ ಇದ್ದರೆ ಅವರ ಬುದ್ಧಿ ತಂದೆಯ ಜೊತೆ ಇರಲು ಸಾಧ್ಯವಿಲ್ಲ. ಆದ್ದರಿಂದ ಬೇಹದ್ದಿನ ತಂದೆಯಿಂದ ಆಸ್ತಿಯನ್ನು ಪಡೆಯುವ ಲೋಭವನ್ನು ಇಟ್ಟುಕೊಳ್ಳಿ ಮಕ್ಕಳೇ ಎಂದು ತಂದೆ ವಿಧಿ ತಿಳಿಸುತ್ತಾರೆ. ಬಾಕಿ ಯಾವುದೇ ವಸ್ತುವಿನ ಮೇಲೆ ಲೋಭವನ್ನು ಇಟ್ಟುಕೊಳ್ಳಬೇಡಿ. ಇಲ್ಲವೆಂದರೆ ಯಾವ ವಸ್ತುವಿನ ಮೇಲೆ ಅಧಿಕ ಪ್ರೀತಿ ಇರುತ್ತದೋ ಅದೇ ವಸ್ತು ಅಂತ್ಯದಲೂ ನೆನಪಿಗೆ ಬರುತ್ತದೆ ಹಾಗೂ ಪದವಿ ಭ್ರಷ್ಟರಾಗುತ್ತೀರಿ.

ಗೀತೆ: ಎದ್ದೇಳಿ ಪ್ರಿಯತಮೆಯರೇ ಎದ್ದೇಳಿ..

ಓಂ ಶಾಂತಿ. ಇಡೀ ಪ್ರಪಂಚದಲ್ಲಿ ನಾವು ಎಲ್ಲರೂ ಸಹೋದರರಾಗಿದ್ದೇವೆಂದು ಹೇಳುತ್ತಾರೆ-ಇದಂತೂ ಮಕ್ಕಳಿಗೆ ಗೊತ್ತಿದೆ. ನಾವೆಲ್ಲಾ ಸಹೋದರರು (ವಿ ಆರ್ ಆಲ್ ಬ್ರದರ್ಸ್). ಆದರೆ ನಾವು ತಂದೆಯ ಮಕ್ಕಳಾಗಿದ್ದೇವೆಂದು ಏಕೆ ಅವರ ಬುದ್ಧಿಯಲ್ಲಿ ಬರುವುದಿಲ್ಲ. ಅವರು ರಚೈತ ನಾವು ರಚನೆ ಆಗಿದ್ದೇವೆ. ಪ್ರಾಣಿಗಳು ನಾವು ಸಹೋದರರೆಂದು ಹೇಳುವುದಿಲ್ಲ. ಮನುಷ್ಯರೇ ನಾವು ಸಹೋದರರೆಂದು ಹೇಳುತ್ತಾರೆ ಹಾಗೂ ತಿಳಿದುಕೊಳ್ಳುತ್ತಾರೆ. ಆತ್ಮ ವಿನಃ ಬೇರೆ ಏನೂ ಇರಲು ಸಾಧ್ಯವಿಲ್ಲ. ಶಾರೀರಕ ತಂದೆಗಂತೂ ಇಷ್ಟು ಜನ ಮಕ್ಕಳು ಇರಲು ಸಾಧ್ಯವಿಲ್ಲ. ಈಗ ನಿಮಗೆ ನಾವು ಪರಸ್ಪರ ಸಹೋದರರಾಗಿದ್ದೇವೆಂದು ಚೆನ್ನಾಗಿ ನೆನಪಿದೆ. ತಂದೆ ಮಕ್ಕಳಿಗೆ ತಿಳಿಸುತ್ತಾರೆ. ಭಗವಾನುವಾಚ - ಹೇ ಮಕ್ಕಳೇ, ಅಂದಾಗ ಬಹಳ ಜನರಿಗೆ ಓದಿಸುತ್ತಾರಲ್ಲವೇ. ಕೇವಲ ಅರ್ಜುನನ ಹೆಸರು ತೆಗೆದುಕೊಳ್ಳುವುದು - ಈ ರೀತಿ ಅಲ್ಲ. ಎಲ್ಲರನ್ನು ಓದಿಸುತ್ತೇನೆ. ಶಾಲೆಯಲ್ಲಿ ಮಾಸ್ಟರ್ ಹೇ ಮಕ್ಕಳೇ ಚೆನ್ನಾಗಿ ಓದಿ ಎಂದು ಹೇಳುತ್ತಾರಲ್ಲವೇ. ವಿದ್ಯಾರ್ಥಿ ಆಗಿದ್ದಾರೆ. ಆದರೆ ಟೀಚರ್ ದೊಡ್ಡವರು, ವಯಸ್ಸಾಗಿರುವ ಕಾರಣ ವಿದ್ಯಾರ್ಥಿಗೆ ಮಕ್ಕಳೇ-ಮಕ್ಕಳೇ ಎಂದು ಹೇಳುತ್ತಾರೆ. ಅಲ್ಲಿ ಯಾರೂ ತಮ್ಮನ್ನು ಆತ್ಮ ಎಂದು ತಿಳಿಯುವುದಿಲ್ಲ. ಅಲ್ಲಿ ಶಾರೀರಕ ಸಂಬಂಧವೇ ಇರುವುದು. ಹೇಗೆ ಗಾಂಧೀಜಿಗೆ ತಂದೆ (ಬಾಪು) ಯ ಪದವಿ ಕೊಟ್ಟುಬಿಟ್ಟಿದ್ದಾರೆ. ಮೆಯರ್ಗೂ ಸಹ ಫಾದರ್ ಎಂದು ಹೇಳುತ್ತಾರೆ. ಆ ರೀತಿ ಪದವಿಯಂತೂ ಬಹಳಷ್ಟು ಜನರಿಗೆ ಕೊಡುತ್ತಾರೆ. ಇಲ್ಲಾದರೆ ನಾವು ಆತ್ಮರು ಸಹೋದರರಾಗಿದ್ದೇಂದು ನೀವು ತಿಳಿದಿದ್ದೀರಿ. ಅಂದಾಗ ಸಹೋದರರ ತಂದೆಯೂ ಅವಶ್ಯವಾಗಿ ಬೇಕು. ಯಾರಿಗೆ ಭಗವಂತ ತಂದೆ (ಗಾಡ್ ಫಾದರ್) ಎಂದು ಹೇಳುತ್ತಾರೋ ಅವರು ನಮ್ಮ ತಂದೆ ಆಗಿದ್ದಾರೆ ಎಂದು ಸರ್ವ ಆತ್ಮರಿಗೆ ಗೊತ್ತಿದೆ. ನಮ್ಮ ಗಾಡ್ ಫಾದರ್ ಎಂದು ಆತ್ಮನೇ ಹೇಳುತ್ತದೆ. ಲೌಕಿಕ ತಂದೆಗೆ ಗಾಡ್ ಎಂದು ಕರೆಯುವುದಿಲ್ಲ. ನಾವು ಆತ್ಮರಾಗಿದ್ದೇವೆಂದು ನಿಮಗೆ ಗೊತ್ತಿದೆ. ನಮ್ಮನ್ನು ಓದಿಸಲು ಅರ್ಥಾತ್ ಪತಿತರನ್ನು ಪಾವನರನ್ನಾಗಿ ಮಾಡಲು ತಂದೆ ಬಂದಿದ್ದಾರೆ. ನಮ್ಮನ್ನು ಪತಿತರಿಂದ ಪಾವನರನ್ನಾಗಿ ಮಾಡಿ ಮತ್ತೆ ಪಾವನ ಪ್ರಪಂಚಕ್ಕೆ ಮಾಲೀಕರನ್ನಾಗಿ ಮಾಡುತ್ತಾರೆ. ಈ ವಿಷಯಗಳನ್ನು ಮತ್ತ್ಯಾರೂ ತಿಳಿದುಕೊಂಡಿಲ್ಲ. ಇಲ್ಲಿ ನೀವು ಮಕ್ಕಳು ತಿಳಿದಿದ್ದರೂ ಕರ್ಮ ಮಾಡುವುದರಲ್ಲಿ ಮರೆತುಹೋಗುತ್ತೀರಿ. ನೆನಪಿನಲ್ಲಿ ಇದ್ದರೆ ವಿಕರ್ಮ ವಿನಾಶವಾಗುತ್ತದೆ. ನೀವೇ ಕರ್ಮಯೋಗಿ ಆಗಿದ್ದೀರಿ. ಸನ್ಯಾಸಿಗಳದ್ದು ಕರ್ಮ ಸನ್ಯಾಸವಾಗಿದೆ. ಕೇವಲ ಬ್ರಹ್ಮತತ್ವದ ಜೊತೆ ಯೋಗ ಇರುತ್ತದೆ. ಆದರೆ ಇಡೀ ದಿನ ಯೋಗ ಆಗುವುದಿಲ್ಲ. ಬ್ರಹ್ಮತತ್ವದಲ್ಲಿ ಹೋಗಲು ಯೋಗ ಮಾಡುತ್ತಾರೆ. ಬ್ರಹ್ಮತತ್ವವನ್ನು ನೆನಪು ಮಾಡುವುದರಿಂದ ನಾವು ಬ್ರಹ್ಮತತ್ವದಲ್ಲಿ ಲೀನ ಅಗಿಬಿಡುತ್ತೇವೆಂದು ತಿಳಿದಿದ್ದಾರೆ. ಆದರೆ ಪೂರ್ತಿ ದಿನ ಬ್ರಹ್ಮತತ್ವ ನೆನಪು ಇರಲು ಸಾಧ್ಯವಿಲ್ಲ ಹಾಗೂ ಆ ನೆನಪಿನಿಂದ ವಿಕರ್ಮ ವಿನಾಶ ಆಗುವುದಿಲ್ಲ. ಪತಿತಪಾವನ ಎಂದು ಗಾಯನವಿದೆ. ಅವರು ತಂದೆಯೇ ಆಗಿದ್ದಾರೆ. ಪತಿತಪಾವನ ಬ್ರಹ್ಮತತ್ವವಾಗಿದೆ ಎಂದು ಹೇಳುವುದಿಲ್ಲ. ಎಲ್ಲರೂ ತಂದೆಗೆ ಪತಿತಪಾವನ ಎಂದು ಕರೆಯುತ್ತಾರೆ. ಅವರು ತಂದೆಯೇ ಆಗಿದ್ದಾರೆ. ಬ್ರಹ್ಮತತ್ವಕ್ಕೆ ತಂದೆ ಎಂದು ಹೇಳುವುದಿಲ್ಲ. ಬ್ರಹ್ಮತತ್ವದ ತಪಸ್ಸು ಮಾಡುವುದಿಲ್ಲ. ಶಿವನ ತಪಸ್ಸು ಮಾಡುತ್ತಾರೆ. ಶಿವನ ಮಂದಿರಗಳೂ ಸಹ ಇದೆ. ತತ್ವದ ಮಂದಿರ ಆಗುತ್ತದೇನು? ಬ್ರಹ್ಮತತ್ವದಲ್ಲಿ ಆತ್ಮರು ಮೊಟ್ಟೆಯ (ಅಂಡಾಕಾರ) ಹಾಗೆ ಇರುತ್ತಾರೆ ಅದ್ದರಿಂದ ಶಾಸ್ತ್ರದಲ್ಲಿ ಬ್ರಹ್ಮಾಂಡ ಎಂದು ಕರೆಯುತ್ತಾರೆ. ಇಂತಹ ಹೆಸರು ಯಾವುದೂ ಇಲ್ಲ. ಅದು ಮನೆಯಾಗಿದೆ, ಹೇಗೆ ಆಕಾಶ ತತ್ವದಲ್ಲಿ (ಸಾಕಾರ ಸೃಷ್ಟಿಯಲ್ಲಿ) ಎಷ್ಟು ಸಾಕಾರಿ ಮನುಷ್ಯರು ಇರುತ್ತಾರೆ. ಹಾಗೆಯೇ ಬ್ರಹ್ಮಾಂಡದಲಿ ಆತ್ಮರು ಇರುತ್ತಾರೆ.

ನೀವು ಮಕ್ಕಳು ನಾವು ಡ್ರಾಮಾದ ಆದಿ-ಮಧ್ಯ-ಅಂತ್ಯದ ಜ್ಞಾನವನ್ನು ಪಡೆದು, ಪೂರ್ತಿ ರಹಸ್ಯಗಳನ್ನು ಅರಿತು, ಪೂರ್ತಿ ವೃಕ್ಷದ ಜ್ಞಾನವನ್ನು ತಿಳಿದು ಮಾಸ್ಟರ್ ಬೀಜ ರೂಪ ಆಗುತ್ತೇವೆ ಎಂದು ತಿಳಿದುಕೊಂಡಿದ್ದೀರಿ. ಪರಮಪಿತ ಪರಮಾತ್ಮನಲ್ಲಿ ಪೂರ್ತಿ ಜ್ಞಾನವಿದೆ ನಾವು ಅವರು ಮಕ್ಕಳಾಗಿದ್ದೇವೆ. ಅವರು ತಿಳಿಸುತ್ತಾರೆ. ಈ ಕಲ್ಪ ವೃಕ್ಷದ ಉತ್ಪತ್ತಿ, ಪಾಲನೆ ಹಾಗೂ ವಿನಾಶ ಹೇಗಾಗುತ್ತದೆ, ಉತ್ಪತ್ತಿ ಎಂದು ಹೇಳುವುದರಿಂದ ಹೇಗೆ ಹೊಸ ಪ್ರಪಂಚವನ್ನು ಉತ್ಪನ್ನ ಮಾಡುತ್ತಾರೆ. ಸ್ಥಾಪನೆ ಶಬ್ದ ಸರಿಯಿದೆ.

ಬ್ರಹ್ಮನ ಮೂಲಕ ಪತಿತರನ್ನು ಪಾವನರನ್ನಾಗಿ ಮಾಡುತ್ತಾರೆ. ಪತಿತಪಾವನ ಶಬ್ದವೂ ಅವಶ್ಯವಾಗಿ ಬೇಕಾಗುತ್ತದೆ. ಸತ್ಯಯುಗದಲ್ಲಿ ಎಲ್ಲರೂ ಸದ್ಗತಿಯಲ್ಲಿ ಇರುತ್ತಾರೆ, ಕಲಿಯುಗದಲ್ಲಿ ಎಲ್ಲರೂ ದುರ್ಗತಿಯಲ್ಲಿ ಇದ್ದಾರೆ. ಏಕೆ ಹೇಗೆ ದುರ್ಗತಿ ಆಯಿತು ಇದು ಯಾರಿಗೂ ಗೊತ್ತಿಲ್ಲ. ಸರ್ವರ ಸದ್ಗತಿ ದಾತ ಒಬ್ಬರೇ ಆಗಿದ್ದಾರೆ ಎಂದು ಗಾಯನ ಮಾಡುತ್ತಾರೆ. ಇದು ಒಂದು ಆಟ ಆಗಿದೆ ಎಂದು ಆತ್ಮ ತಿಳಿದಿದೆ. "ಸದಾ ಶಿವ"ಎನ್ನುವುದು ತಂದೆಯ ಮಹಿಮೆ ಆಗಿದೆ. ಸುಖ ಕೊಡುವವರು ಶಿವ ಆಗಿದ್ದಾರೆ, ದುಃಖಹರ್ತ-ಸುಖಕರ್ತ ಎಂದು ಮಹಿಮೆಯೂ ಸಹ ಇದೆ. ಭಾರತದಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯ ಇತ್ತು. ಈಗ ಇಲ್ಲ. ಲಕ್ಷ್ಮೀ-ನಾರಾಯಣರಿಗೆ ಭಗವಾನ್-ಭಾಗವತಿ ಎಂದು ಕರೆಯುತ್ತಾರೆ, ಅವರ ರಾಜಧಾನಿಯನ್ನು ಯಾರು ಸ್ಥಾಪನೆ ಮಾಡಿದ್ದಾರೆ? ಭಗವಂತ ನಿರಾಕಾರ ಸ್ಥಾಪನೆ ಮಾಡಿದ್ದಾರೆ, ಅವರಿಂದ ಆತ್ಮರು ಆಸ್ತಿಯನ್ನು ಪಡೆದುಕೊಳ್ಳುತ್ತಾರೆ. ಆತ್ಮನೇ 84 ಜನ್ಮಗಳನ್ನು ಪಡೆಯುತ್ತಾ-ಪಡೆಯುತ್ತಾ ಬೀಳುತ್ತಾ ಬಂದಿದೆ. ಬೀಳುತ್ತಾ ದುರ್ಗತಿಯನ್ನು ಪಡೆದಿದೆ. ಪರಮಾತ್ಮ ಸರ್ವವ್ಯಾಪಿ ಅಲ್ಲ ಎಂದು ತಿಳಿಸಬೇಕು. ಈ ತಂದೆ ಸದ್ಗತಿದಾತ ಆಗಿದ್ದಾರೆ, ನಾವೆಲ್ಲಾ ಸಹೋದರರಾಗಿದ್ದೇವೆ, ತಂದೆ ಅಲ್ಲ. ತಂದೆಯೇ ಸಹೋದರರ ರೂಪವನ್ನು ಧರಿಸುತ್ತಾರೆಂದು ಹೇಳುತ್ತಾರೇನು? ಅಲ್ಲ ಆದ್ದರಿಂದ ಮೊದಲು ಪರಮಪಿತ ಪರಮಾತ್ಮನ ಜೊತೆ ನಿಮ್ಮ ಸಂಬಂಧ ಏನು? ಎಂದು ಕೇಳಿ. ಲೌಕಿಕ ಸಂಬಂಧವಂತೂ ಎಲ್ಲರಿಗೆ ಗೊತ್ತಿದೆ. ಆತ್ಮರಿಗೆ ನಿರಾಕಾರ ತಂದೆ ಆಗಿದ್ದಾರೆ. ಅವರಿಗೆ ಹೆವನ್ಲಿ ಗಾಡ್ ಫಾದರ್ ಎಂದು ಕರೆಯುತ್ತಾರೆ. ತಂದೆ ಅವಶ್ಯವಾಗಿ ಹೊಸ ರಚನೆಗೆ ಮಾಲೀಕರನ್ನಾಗಿ ಮಾಡಿರುತ್ತಾರೆ. ಈಗ ನಾವು ಮಾಲೀಕರಲ್ಲ. ನಾವು ಸುಖಿ ಆಗಿದ್ದೆವು. ಯಾರು ದುಃಖಿಯನ್ನಾಗಿ ಮಾಡಿದ್ದಾರೆ? ಇದು ಗೊತ್ತಿಲ್ಲ. ಅರ್ಧಕಲ್ಪದಿಂದ ರಾವಣರಾಜ್ಯ ನಡೆದಿದೆ. ಅಂದಾಗ ಭಾರತಕ್ಕೆ ಈ ಸ್ಥಿತಿ ಆಗಿದೆ. ಭಾರತ ಪರಮಪಿತ ಪರಮಾತ್ಮನ ಜನ್ಮ ಸ್ಥಾನವಾಗಿದೆ. ಭಾರತದಲ್ಲಿ ಭಗವಂತ ಬಂದಿದ್ದಾರೆ. ಅವಶ್ಯವಾಗಿ ಸ್ವರ್ಗ ಸ್ಥಾಪನೆ ಮಾಡಿರಬಹುದು. ಶಿವಜಯಂತಿ ಎಂದೂ ಸಹ ಗಾಯನವಿದೆ. ನಾವು ಇಂತಹವರ ಜನ್ಮದಿನವನ್ನು ಆಚರಣೆ ಮಾಡುತ್ತೇವೆ ಎಂದೂ ಸಹ ಬರೆಯಬಹುದು. 1937 ರಲ್ಲಿ ಸ್ಥಾಪನೆ ಆಯಿತು. ಈಗ 70 ವರ್ಷಗಳು (2007ರಲ್ಲಿ) ಪೂರ್ತಿ ಆಗಿದೆ. ಅಂದಾಗ ಮನುಷ್ಯರಿಗೆ ಆಶ್ಚರ್ಯವಾಗುತ್ತದೆ-ಇವರು ಏನು ಹೇಳುತ್ತಿದ್ದಾರೆ? ಶುಭಾಶಯಗಳನ್ನು ಕೊಡಿ. ನಾವು ಪತಿತಪಾವನ, ಸದ್ಗತಿದಾತ, ಪರಮಪಿತ ಪರಮಾತ್ಮ ಶಿವನ ಜಯಂತಿ ಆಚರಣೆ ಮಾಡುತ್ತಿದ್ದೇವೆ ಎಂದು ಹೇಳಿ. ಆ ದಿನ ಬಹಳ ವಿಜೃಂಬನೆಯಿಂದ ಮಾಡಬೇಕು, ಸರ್ವರ ಸದ್ಗತಿದಾತನ ಜನ್ಮದಿನ ಕಡಿಮೆ ಮಾತೇನು? ವಿಮಾನದ ಮೂಲಕ ದೊಡ್ಡ-ದೊಡ್ಡ ಕರಪತ್ರಗಳನ್ನು (ಪಾಂಪ್ಲೆಟ್) ನಗರದಲ್ಲಿ ಹಾಕಬೇಕು. ನ್ಯೂಸ್ ಪೇಪರಿನಲ್ಲೂ ಸಹ ಬರುತ್ತದೆ. ಬಹಳ ಸುಂದರ ಕಾರ್ಡ್ಗಳನ್ನು ಮಾಡಬೇಕು. ಅತಿಪ್ರಿಯ ತಂದೆಯ ಮಹಿಮೆಯನ್ನು ಬರೆಯಬೇಕು. ಭಾರತವನ್ನು ಪುನಃ ಸ್ವರ್ಗವನ್ನಾಗಿ ಮಾಡಲು ಬಂದಿದ್ದಾರೆ. ಅದೇ ತಂದೆ ರಾಜಯೋಗವನ್ನು ಕಲಿಸುತ್ತಿದ್ದಾರೆ. ಆಸ್ತಿಯೂ ಸಹ ಅವರೇ ಕೊಡುತ್ತಾರೆ. ಬಹಳ ಆಕರ್ಷಣೀಯವಾಗಿ ಶಿವರಾತ್ರಿ ಕಾರ್ಡನ್ನು ಮುದ್ರಿಸಬೇಕು. ಪ್ಲಾಸ್ಟಿಕ್ ಮೇಲೂ ಸಹ ಮುದ್ರಿಸಬಹುದು. ಆದರೆ ಚಿಕ್ಕಬುದ್ಧಿಯವರಿರುತ್ತಾರೆ, ರಾಜಾ-ರಾಣಿ ಅಂತೂ ಕೋಟಿಯಲ್ಲಿ ಕೆಲವರು ಆಗುತ್ತಾರೆ. ಆದರೆ ಯಾರು ಹುಡುಗಾಟಿಕೆಯಿಂದ ಇರುತ್ತಾರೋ ಅವರು ಪ್ರಜೆಗಳು ಆಗುತ್ತಾರೆ. 108ರ ಮಾಲೆ ಇದೆಯಲ್ಲವೇ, ಆದರೆ ಪ್ರಜೆಗಳು ಬಹಳ ಇರುತ್ತಾರೆ. ನಾವಂತೂ ಹುಡುಗಾಟಿಕೆಯಲ್ಲಿ ಇದ್ದೇವೆ, ಬಹಳ ಪುರುಷಾರ್ಥ ಮಾಡಬೇಕು ಎಂದಲ್ಲ. ತಂದೆ ಬಹಳ ತಿಳಿಸುತ್ತಾರೆ ಆದರೆ ಕೆಲವರಷ್ಟೇ ಆಚರಣೆಯಲ್ಲಿ ತರುತ್ತಾರೆ. ಇಲ್ಲಿ ತಮ್ಮನ್ನು ಅಲ್ಲಾ ಮಕ್ಕಳು ಎಂದು ತಿಳಿದುಕೊಳ್ಳುತ್ತಾರೆ ಹೊರಗೆ ಹೋದ ನಂತರ ಮಾಯೆ ಮೂರ್ಖರನ್ನಾಗಿ ಮಾಡಿಬಿಡುತ್ತದೆ, ಮಾಯೆ ಎಷ್ಟು ಕಠಿಣವಾಗಿದೆ. ರಾಜ್ಯವನ್ನು ಪಡೆದುಕೊಳ್ಳುವವರು ಬಹಳ ಕಡಿಮೆ ಜನ ಇರುತ್ತಾರೆ. ಚಂದ್ರವಂಶದವರಿಗೂ ನಾವು ಫೇಲ್ ಎನ್ನುತ್ತೇವೆ. ನೀವು ಎಲ್ಲರ ವಿದ್ಯೆ ಹಾಗೂ ಪದವಿಯನ್ನು ತಿಳಿದುಕೊಂಡಿದ್ದೀರಿ. ಪ್ರಪಂಚದಲ್ಲಿ ರಾಮಚಂದ್ರನ ಪದವಿಯ ಬಗ್ಗೆ ಯಾರಿಗಾದರು ಗೊತ್ತಿದೆಯೇನು? ತಂದೆ ಚೆನ್ನಾಗಿ ತಿಳಿಸುತ್ತಾರೆ. ನಾವು ಶಿವರಾತ್ರಿಗೆ ನಿಮಂತ್ರಣವನ್ನು ಮಾಡಬೇಕು ಯಾವುದನ್ನು ಮನುಷ್ಯರು ನೋಡಿದ ತಕ್ಷಣ ಆಶ್ಚರ್ಯ ಆಗಬೇಕು. ವಿಚಾರ ಸಾಗರ ಮಂಥನ ಗಾಯನವಿದೆಯಲ್ಲವೇ. ಶಿವಬಾಬಾ ವಿಚಾರಸಾಗರ ಮಂಥನ ಮಾಡುತ್ತಾರೇನು? ಇದು ಮಕ್ಕಳ ಕೆಲಸವಾಗಿದೆ. ತಂದೆ ಸಲಹೆ ಕೊಡುತ್ತಾರೆ, ಬುದ್ಧಿಯಲ್ಲಿ ಬರುತ್ತದೆ ಆದರೆ ಕೆಲಸ ಮಾಡಿಲ್ಲವೆಂದರೆ ಅವರಿಗೆ ಬಾಬಾ ತಿಳುವಳಿಕೆ ಇಲ್ಲದವರು ಎಂದು ಕರೆಯುತ್ತಾರೆ. ಪರಮಪಿತ ಪರಮಾತ್ಮ ನಮ್ಮನ್ನು ಬ್ರಹ್ಮನ ಮೂಲಕ ವಿಷ್ಣುಪುರಿಗೆ ಮಾಲೀಕರನ್ನಾಗಿ ಮಾಡುತ್ತಾರೆ ಎಂದು ಮಕ್ಕಳಿಗೆ ಗೊತ್ತಿದೆ. ಶಂಕರನ ಮೂಲಕ ವಿನಾಶ ಆಗುತ್ತದೆ. ತ್ರಿಮೂರ್ತಿ ಮೇಲೆ ಇದ್ದಾರೆ.

ನೀವೆಲ್ಲಾ ಆತ್ಮಿಕ ಯಾತ್ರೆ ಕಲಿಸುವಂತಹ ಆತ್ಮಿಕ ಮಾರ್ಗದರ್ಶಕರಾಗಿದ್ದೀರಿ. ಸತ್ಯ ಮೇವ ಜಯತೆ ಎಂದು ನೀವೂ ಸಹ ಬರೆಯಬಹುದು, ಸತ್ಯತಂದೆ ನಮಗೆ ವಿಜಯವನ್ನು ಪಡೆಯುವುದು ಕಲಿಸುತ್ತಾರೆ ಅಥವಾ ವಿಜಯವನ್ನು ಪ್ರಾಪ್ತಿ ಮಾಡಿಸುತ್ತಾರೆ. ಯಾರಾದರೂ ವಾದಿಸುತ್ತಾರೆಂದಾಗ ಅವರಿಗೆ ತಿಳಿಸಬಹುದು. ಶಿವಜಯಂತಿ ಹೇಗೆ ಮಾಡಬೇಕು ಎಂದು ಬಾಬಾರವರಿಗೆ ಯೋಚನೆ ನಡೆಯುತ್ತದೆ. ಗೀತೆಯ ಭಗವಂತ ಶಿವ ಆಗಿದ್ದಾರೆ ಕೃಷ್ಣನಲ್ಲ, ಇದನ್ನು ಬಹಳ ಪ್ರಚಾರ ಮಾಡಬೇಕು. ಶಿವ ರಚಯಿತ, ಕೃಷ್ಣ ರಚನೆ ಆಗಿದ್ದಾರೆ. ಆಸ್ತಿ ಯಾರಿಂದ ಸಿಗುತ್ತದೆ? ಶ್ರೀಕೃಷ್ಣ ಮೊದಲನೆಯ ರಚನೆ ಆಗಿದ್ದಾರೆ. ಸಾಗರದಲ್ಲಿ ಆಲದ ಎಲೆಯ ಮೇಲೆ ಶ್ರೀಕೃಷ್ಣ ಬಂದಿರುವುದನ್ನು ತೋರಿಸುತ್ತಾರೆ. ಇದು ಗರ್ಭ ಮಹಲಿನ ಮಾತಾಗಿದೆ. ಸತ್ಯಯುಗದಲ್ಲಿ ಗರ್ಭ ಮಹಲಿನಲ್ಲಿ ಬಹಳ ಮಜವಾಗಿ ಇರುತ್ತದೆ. ಇಲ್ಲಿ ನರಕದಲ್ಲಿ ಗರ್ಭ ಜೈಲಿನಲ್ಲಿ ಶಿಕ್ಷೆ ಭೋಗಿಸುತ್ತಾರೆ. ಸತ್ಯಯುಗದಲ್ಲಿ ಗರ್ಭ ಮಹಲ್, ಕಲಿಯುಗದಲ್ಲಿ ಗರ್ಭ ಜೈಲ್ ಆಗುತ್ತದೆ. ಕೃಷ್ಣನ ಚಿತ್ರ ಎಷ್ಟು ಚೆನ್ನಾಗಿದೆ. ನರಕವನ್ನು ಒದೆಯುವುದು ತೋರಿಸುತ್ತಾರೆ. ಕೃಷ್ಣನಿಗೆ 84 ಜನ್ಮಗಳನ್ನೂ ಸಹ ಬರೆದಿದ್ದಾರೆ. ಭಗವಾನುವಾಚ, ನಿಮಗೆ ತಮ್ಮ ಜನ್ಮಗಳ ಬಗ್ಗೆ ಗೊತ್ತಿಲ್ಲ, ನಾನು ತಿಳಿಸುತ್ತೇನೆ. ಅಂದಾಗ

ಯಾರು 84 ಜನ್ಮಗಳನ್ನು ಪಡೆದುಕೊಂಡಿದ್ದಾರೋ ಅವರಿಗೆ ತಿಳಿಸುತ್ತೇನೆ. ಎಷ್ಟು ಸಹಜವಾಗಿದೆ. ಜೊತೆಯಲ್ಲಿ ನಡವಳಿಕೆಯೂ ಸಹ ಇರಬೇಕು. ಬೇಹದ್ದಿನ ತಂದೆಯಿಂದ ಆಸ್ತಿಯನ್ನು ಪಡೆಯುವ ಲೋಭ ಇರಬೇಕು ಬೇರೆ ಯಾವುದೇ ವಸ್ತುವಿನ ಲೋಭ ಇರಬಾರದು. ಆದ್ದರಿಂದ ಬುದ್ಧಿ ಹೋಗುವ ವಸ್ತುಗಳು ಯಾವುದೂ ನಿಮ್ಮ ಹತ್ತಿರ ಇಟ್ಟುಕೊಳ್ಳಬಾರದು. ಇಲ್ಲವೆಂದರೆ ಪದವಿ ಭ್ರಷ್ಟರಾಗಿಬಿಡುತ್ತೀರಿ. ದೇಹ ಸಹಿತ ಏನೆಲ್ಲಾ ಇದೆಯೋ ಎಲ್ಲದರಿಂದ ಬುದ್ಧಿಯನ್ನು ತೆಗೆದು ಹಾಕಬೇಕು. ಒಬ್ಬ ತಂದೆಯನ್ನು ನೆನಪು ಮಾಡಬೇಕು. ಕೆಲವು ಮನುಷ್ಯರು ಬಹಳ ಸಾಮಾಗ್ರಿ ಇಟ್ಟುಕೊಂಡರೆ ಸಾಯುವ ಸಮಯದಲ್ಲಿ ಅದೇ ನೆನಪಿಗೆ ಬರುತ್ತದೆ. ಯಾವ ವಸ್ತು ಹೆಚ್ಚು ಪ್ರಿಯವಾಗಿರುತ್ತದೋ ಅದು ಅಂತ್ಯದಲ್ಲಿ ಅವಶ್ಯವಾಗಿ ನೆನಪು ಬರುತ್ತದೆ. ಯಾವುದೇ ವಸ್ತುವನ್ನು ಲೋಭಕ್ಕೆ ವಶರಾಗಿ ಮುಚ್ಚಿಡಬೇಡಿ ಎಂದು ಮಕ್ಕಳಿಗೆ ತಂದೆ ತಿಳಿಸುತ್ತಾರೆ. ಯಜ್ಞದಿಂದ ಪ್ರತಿ ವಸ್ತು ಸಿಗುತ್ತದೆ. ಏನಾದರೂ ಮುಚ್ಚಿಟ್ಟರೆ ಅವಶ್ಯವಾಗಿ ಬುದ್ಧಿ ಸಿಕ್ಕಿಹಾಕಿಕೊಳ್ಳುತ್ತದೆ. ಶಿವಬಾಬಾನ ಭಂಡಾರವಾಗಿದೆ, ಮಕ್ಕಳಿಗೆ ಎಲ್ಲಾ ಸಿಗಬೇಕು ಎಂದು ತಂದೆಯ ಆಜ್ಞೆ ಆಗಿದೆ. ಕೆಲವರ ಸೀರೆ ಚೆನ್ನಾಗಿದೆ ನಾವೂ ತೆಗೆದುಕೊಳ್ಳೋಣ-ಈ ರೀತಿ ಯೋಚನೆಯೂ ಸಹ ಬರಬಾರದು. ಅರೇ ನೀವು ತಂದೆಯಿಂದ ರಾಜ್ಯದ ಆಸ್ತಿಯನ್ನು ಪಡೆಯಲು ಬಂದಿದ್ದೀರೋ ಅಥವಾ ಸೀರೆಯ ಆಸ್ತಿಯನ್ನು ಪಡೆಯಲು ಬಂದಿದ್ದೀರೋ? ಯಾರು ಚೆನ್ನಾಗಿ ಸೇವೆ ಮಾಡುತ್ತಾರೋ ಅವರ ಮೇಲೆ ಎಲ್ಲರೂ ಬಲಿ ಆಗುತ್ತಾರೆ. ನಾವು ಶಿವಬಾಬಾನ ಭಂಡಾರದಿಂದ ಸಿಕ್ಕಿರುವುದರ ವಿನಃ ಬೇರೆ ಏನೂ ಧರಿಸುವುದಿಲ್ಲ ಎಂದು ಹೇಳಿ. ನಾವು ಯಜ್ಞದಿಂದ ಪಡೆದುಕೊಂಡಾಗ ತಂದೆಯ ನೆನಪು ಬರುತ್ತದೆ. ಶಿವಬಾಬಾನ ಭಂಡಾರದಿಂದ ಇದು ಸಿಕ್ಕಿದೆ. ಇಲ್ಲವೆಂದರೆ ಕಳ್ಳತನ ಮಾಡುವ ಅಭ್ಯಾಸ ಆಗಿಬಿಡುತ್ತದೆ. ಇಲ್ಲಿ ತ್ಯಾಗ ಮಾಡಿದರೆ ಅಲ್ಲಿ ಫಸ್ಟ್ಕ್ಲಾಸ್ ವಸ್ತುಗಳು ಸಿಗುತ್ತದೆ. ಶಿವಬಾಬಾ ಆಗಾಗ ಮಕ್ಕಳನ್ನು ಪರೀಕ್ಷೆ ಮಾಡುತ್ತಾರೆ. ಎಷ್ಟು ದೇಹಾಭಿಮಾನ ಇದೆ ಎಂದು ನೋಡೋಣ. ಏನು ತಿನ್ನಿಸುತ್ತಾರೋ ಅದು ತಿನ್ನುತ್ತೇವೆ, ಎಲ್ಲಿ ಕೂರಿಸುತ್ತಾರೋ.. ಇದು ನಿಮ್ಮ ಪ್ರತಿಜ್ಞೆ ಆಗಿದೆ. ಇದು ಶಿವಬಾಬಾ ಕೊಟ್ಟಿದ್ದಾರೆ ಎಂದು ಮನಸ್ಸಿನಲ್ಲಿ ಇರಬೇಕು. ಅವಸ್ಥೆ ಎಷ್ಟು ಚೆನ್ನಾಗಿರಬೇಕು. ತಂದೆಯಿಂದ ಆಸ್ತಿಯನ್ನು ಪಡೆಯಬೇಕೆಂದರೆ ಶ್ರೀಮತದ ಮೇಲೆ ಪೂರ್ತಿ ಪುರುಷಾರ್ಥವನ್ನು ಮಾಡಬೇಕು. ತಂದೆಯ ಸಲಹೆ ಮೇಲೆ ನಡೆಯಬೇಕು. ಬಾಬಾ-ಮಮ್ಮಾ ಎಂದು ಹೇಳುತ್ತೀರೆಂದರೆ ಅವರನ್ನು ಪೂರ್ತಿ ಫಾಲೋ ಮಾಡಬೇಕು. ಎಲ್ಲರಿಗೂ ಮಾರ್ಗವನ್ನು ತೋರಿಸಬೇಕು. ತಂದೆಯಿಂದ ಆಸ್ತಿ ಸಿಕ್ಕಿತ್ತು, ಈಗ ಪುನಃ ಸಿಗುತ್ತಿದೆ. ನೆನಪಿನ ಯಾತ್ರೆ ಮಾಡುತ್ತಿರಿ. ನೀವೆಷ್ಟು ಶಕ್ತಿಶಾಲಿ ಆಗುತ್ತೀರೋ ಮಾಯೆ ಅಷ್ಟು ಜೋರಾಗಿ ಬರುತ್ತದೆ ಎಂದು ತಂದೆ ತಿಳಿಸುತ್ತಾರೆ. ನೀವು ಏಕೆ ತಬ್ಬಿಬ್ಬಾಗುತ್ತೀರಿ? ಕೆಲ-ಕೆಲ ಮಕ್ಕಳಿಗೆ ಬಾಬಾ ನೀವು ಚೆನ್ನಾಗಿ ಸೇವೆ ಮಾಡುವವರೆಂದು ಬರೆಯುತ್ತಾರೆ. ಪೂರ್ತಿ ಆಯುಸ್ಸು ಬ್ರಹ್ಮಚರ್ಯವಾಗಿ ಇರುತ್ತೀರೇನು? ಏಂದು ಮಾಯೆಯ ಬಿರುಗಾಳಿ ಬರುತ್ತದೆ. ವಿವಾಹ ಮಾಡಿಕೊಳ್ಳೋಣ, ಇದು ಮಾಡೋಣ ಎಂದು ವೃದ್ಧರಾಗಿದ್ದರೂ ಇದರಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಮಾಯೆ ವೃದ್ಧರನ್ನೂ ಸಹ ಯುವಕರನ್ನಾಗಿ ಮಾಡುತ್ತದೆ. ಆ ರೀತಿ ಸತಾಯಿಸುತ್ತದೆ. ನೀವು ಏಕೆ ಹೆದರುತ್ತೀರಿ? ಭಲೆ ಎಷ್ಟಾದರೂ ಬಿರುಗಾಳಿ ಬರಲಿ, ತಂದೆಯನ್ನು ನೆನಪು ಮಾಡುವುದರಿಂದ ಬಚಾವ್ ಆಗುತ್ತೀರಿ.

ಮಧುರಾತಿ ಮಧುರ ಅಗಲಿಹೋಗಿ ಮರಳಿಸಿಕ್ಕಿರುವ ಮಕ್ಕಳಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಲೋಭಕ್ಕೆ ವಶರಾಗಿ ಯಾವುದೇ ವಸ್ತುವನ್ನು ಮುಚ್ಚಿಟ್ಟುಕೊಂಡು ತಮ್ಮ ಹತ್ತಿರ ಇಟ್ಟುಕೊಳ್ಳಬಾರದು. ತಂದೆಯ ಆದೇಶನುಸಾರವಾಗಿ ನಡೆದುಕೊಳ್ಳಬೇಕು.

2. ಬಾಬಾ ಏನು ತಿನ್ನಿಸುತ್ತಾರೋ, ಏನು ತೊಡಗಿಸುತ್ತಾರೋ, ಒಬ್ಬ ಶಿವಬಾಬಾನ ಭಂಡಾರದಿಂದಲೇ ತೆಗೆದುಕೊಳ್ಳಬೇಕು.

ವರದಾನ: ಸರ್ವ ಖಜಾನೆಗಳನ್ನು ಹಂಚುತ್ತಾ ಮತ್ತು ಹೆಚ್ಚಿಸುತ್ತಾ ಸದಾ ಭರ್ಪೂರ್ ಆಗಿರುವಂತಹ ಬಾಲಕ್ ಸೋ ಮಾಲಿಕ್ ಭವ

ತಂದೆಯು ಎಲ್ಲಾ ಮಕ್ಕಳಿಗೂ ಒಂದೇ ಸಮಾನವಾಗಿ ಖಜಾನೆ ಕೊಟ್ಟು ಬಾಲಕರಿಂದ ಮಾಲಿಕರನ್ನಾಗಿ ಮಾಡಿರುವರು. ಖಜಾನೆ ಎಲ್ಲರಿಗೂ ಒಂದೇ ಸಮ ಸಿಕ್ಕಿದೆ ಆದರೆ ಒಂದುವೇಳೆ ಯಾವುದೂ ಭರ್ಪೂರ್ ಇಲ್ಲವೆಂದರೆ ಅದರ ಕಾರಣವಾಗಿದೆ ಖಜಾನೆಯನ್ನು ಸಂಭಾಲನೆ ಮಾಡುವ ಅಥವಾ ಹೆಚ್ಚಿಸುವುದು ಬರುವುದಿಲ್ಲ. ಹೆಚ್ಚಿಸುವ ರೀತಿಯಾಗಿದೆ ಹಂಚುವುದು ಮತ್ತು ಸಂಭಾಲನೆ ಮಾಡುವ ರೀತಿಯಾಗಿದೆ ಖಜಾನೆಯನ್ನು ಪದೇ-ಪದೇ ಚೆಕ್ ಮಾಡುವುದು. ಗಮನ ಇಡುವುದು ಮತ್ತು ಚೆಕಿಂಗ್- ಈ ಇಬ್ಬರು ಚೌಕಿದಾರರು ಸರಿಯಾಗಿದ್ದಲ್ಲಿ ಖಜಾನೆ ಸದಾ ಸುರಕ್ಷಿತವಾಗಿರುವುದು.

ಸ್ಲೋಗನ್: ಪ್ರತಿ ಕರ್ಮ ಅಧಿಕಾರಿತನದ ನಿಶ್ಚಯ ಮತ್ತು ನಶೆಯಿಂದ ಮಾಡಿದಾಗ ಪರಿಶ್ರಮ ಪಡುವ ಅಗತ್ಯ ಇರುವುದಿಲ್ಲ.